



36 ವರ್ಷಗಳ ಹಿಂದೆ ಸಿದ್ದರಾಮಯ್ಯ ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿದ್ದಾಗ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದ ನಾನು ಅದರ ಸದಸ್ಯನಾಗಿದ್ದೆ. ಅಂದಿನಿಂದಲೂ ಸಿದ್ದರಾಮಯ್ಯನವರ ಕನ್ನಡ ಪ್ರೀತಿ, ಕಳಕಳಿಯನ್ನು ನಾನು ಚೆನ್ನಾಗಿ ಬಲ್ಲೆ.

ಕನ್ನಡ ಭಾಷೆ, ಸಂಸ್ಕೃತಿ ಹಾಗೂ ನಾಡಿನ ಉದ್ಧಾರದ ವಿಷಯದಲ್ಲಿ ಅತ್ಯಂತ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಏಕೆಂದರೆ ಅವರು ತನ್ನ ಪ್ರಾಯದ ಕಾಲದಲ್ಲಿ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಜತೆಗೆ ಚಳವಳಿಯಲ್ಲಿ ತೊಡಗಿದವರು.

ಮುಖ್ಯಮಂತ್ರಿಯಾದ ಮೇಲೆ ಕನ್ನಡಕ್ಕೆ ಉತ್ತೇಜನ ನೀಡುವ ಕೆಲಸಕ್ಕೆ ಹೆಚ್ಚು ಆದ್ಯತೆ ಕೊಟ್ಟಿದ್ದಾರೆ. ಕನ್ನಡ, ಸಂಸ್ಕೃತಿ, ಜಲ, ನೆಲದ ವಿಷಯ ಬಂದಾಗ ಯಾವುದೇ ಅಳುಕಿಲ್ಲದೇ ನಾಡಪರವಾಗಿ ಧ್ವನಿ ಎತ್ತುವ ಅವರ ಗುಣ ಮೆಚ್ಚುಗೆ ಪಡುವಂತಹದು. ಕನ್ನಡಕ್ಕೆ ಹೆಮ್ಮೆ ತರುವ ಯೋಜನೆಗಳನ್ನು ರೂಪಿಸಿದ್ದಾರೆ.

ಭಾಷಾ ಮಾಧ್ಯಮದ ವಿಷಯದಲ್ಲಿ ಕೋರ್ಟ್‌ನ ತೀರ್ಮಾನಗಳು ಕೆಲವೊಮ್ಮೆ ರಾಜ್ಯಕ್ಕೆ ಹಿನ್ನಡೆ ತಂದಿದ್ದು ಇದೆ. ಈ ವಿಷಯದಲ್ಲಿ ಸರ್ಕಾರ ನಿಲುವು ಪ್ರದರ್ಶಿಸುವ ಮುನ್ನ ಸಾಹಿತಿಗಳ ಸಭೆ ಕರೆದಿದ್ದರು. ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರತಿಯೊಬ್ಬರ ಅಭಿಪ್ರಾಯವನ್ನು ಅವರು ವೈಯಕ್ತಿಕವಾಗಿ ಕೇಳಿ, ಆಲಿಸಿದರು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ಎಂದು ಅವರು ಯಾವಾಗಲೂ ಪ್ರತಿಪಾದಿಸುತ್ತಿದ್ದಾರೆ. ಸರ್ಕಾರ ರಚನಾತ್ಮಕವಾಗಿ ಕೆಲಸ ಮಾಡಿದಾಗ ಅದಕ್ಕೆ ಎಲ್ಲರೂ ಬೆಂಬಲ ನೀಡಬೇಕು. ಆ ಕೆಲಸ ಕನ್ನಡ ನಾಡಿನಲ್ಲಿ ಆಗಲಿ.

**–ಕೆ.ಎಸ್. ನಿಸಾರ್ ಅಹಮದ್, ಕವಿ.**

ಸಿದ್ದರಾಮಯ್ಯನವರು ಮುಖ್ಯಮಂತ್ರಿ, ಉಮಾಶ್ರೀ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಸ್ತುವಾರಿ ಹೊತ್ತುಕೊಳ್ಳುತ್ತಿದ್ದಂತೆ ಮೊದಲು ಮಾಡಿದ ಕೆಲಸವೆಂದರೆ ಕನ್ನಡ– ಕರ್ನಾಟಕ ಕಟ್ಟುವ ಆಶಯಕ್ಕಾಗಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ನೀತಿ ರೂಪಿಸಲು ಸಮಿತಿ ರಚಿಸಿದ್ದು. 2013ರಲ್ಲಿ ರಚನೆಯಾಗಿದ್ದ ಸಮಿತಿಯು 2014ರಲ್ಲಿ ವರದಿ ಕೊಟ್ಟಿತ್ತು. ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುವ ಸರ್ಕಾರದ ಇದರ ಅನುಷ್ಠಾನಕ್ಕೆ ಆದೇಶವನ್ನೂ ಹೊರಡಿಸಿದೆ. ನೀತಿ ಜಾರಿಗಾಗಿ 59 ಕೋಟಿ ಅನುದಾನವನ್ನೂ ನೀಡಲು ಸಚಿವ ಸಂಪುಟ ಸಭೆ ಸಮ್ಮತಿಸಿದೆ.

ಪ್ರಶಸ್ತಿ ನೀಡಿಕೆ, ಅಕಾಡೆಮಿಗಳ ನೇಮಕ, ಅನುದಾನ ಬಿಡುಗಡೆ, ಪುಸ್ತಕ ಪ್ರಕಟಣೆ ಹೀಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸುವ ನಾನಾ ಚಟುವಟಿಕೆಗಳಿಗೆ ಚೌಕಟ್ಟು ಇರಲಿಲ್ಲ. ಇದೆಲ್ಲದಕ್ಕೂ ಒಂದು ಅಚ್ಚುಕಟ್ಟು ತರುವ ರೀತಿಯೊಳಗೆ ನೀತಿಯನ್ನು ಜಾರಿ ಮಾಡಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೆಚ್ಚು ಜನಮುಖಿಯಾಗಿ, ಕಲಾವಿದರ ಸ್ನೇಹಿಯಾಗಿ, ಕನ್ನಡದ ಕೆಲಸಕ್ಕೆ ಸದಾ ತನ್ಮಯವಾಗಿ ತೊಡಗಿಕೊಳ್ಳುವಂತಾಗಲು ಇಲಾಖೆಯ ವಿಕೇಂದ್ರೀಕರಣವನ್ನು ಮಾಡಬೇಕು ಎಂಬುದು ಪ್ರಮುಖ ಶಿಫಾರಸುಗಳಲ್ಲಿ ಒಂದಾಗಿತ್ತು. ಬೆಂಗಳೂರು, ಮೈಸೂರು, ಕಲಬುರ್ಗಿ ಹಾಗೂ ಬೆಳಗಾವಿ ಕಂದಾಯ ವಿಭಾಗದಲ್ಲಿ ನಾಲ್ಕು ಪ್ರಾದೇಶಿಕ ಕಚೇರಿಗಳನ್ನು ತೆರೆಯಲು ಸರ್ಕಾರ ತೀರ್ಮಾನಿಸಿದೆ.

ಕನ್ನಡ ಮತ್ತು ಕಲೆಯನ್ನು ಉಳಿಸಿ, ಬೆಳೆಸಲು ಪ್ರೌಢಶಾಲೆಗಳಲ್ಲಿ ಸಾಂಸ್ಕೃತಿಕ ಶಿಕ್ಷಕರ ನೇಮಕ ಮಾಡುವುದು ಇದರ ಮತ್ತೊಂದು ಆಶಯ. ಮಕ್ಕಳ ಮನಸ್ಸು ಕಲೆ, ಸಂಸ್ಕೃತಿಯ ಕಡೆಗೆ ಅರಳಿ, ಕಲೆಯನ್ನು ಬೆಳೆಗಿಸುವಲ್ಲಿ ತೊಡಗಿಕೊಳ್ಳುವ ವಯಸ್ಸಿನಲ್ಲೇ ಈ ಬಗ್ಗೆ ಆಸಕ್ತಿ ಮೂಡಿಸಲು ಶಿಕ್ಷಕರ ನೇಮಕಕ್ಕೆ ಸರ್ಕಾರ ಅಸ್ತು ಎಂದಿದೆ.

ನೀತಿಯ ಶಿಫಾರಸಿನ ಅನುಸಾರ ರಾಜ್ಯದಲ್ಲಿ ಬುಡಕಟ್ಟು ವಿಶ್ವವಿದ್ಯಾಲಯ

